ದಿನಾಂಕಃ **29.11.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀ **MN** ವಕೀಲರಿಂದಃ

ವಾದಿಗೆ **3 ½** ಎಕರೆ ಜಮೀನು ಇರುತ್ತದೆ. ಪ್ರತಿವಾದಿಯ ಮನೆಯ ವಿಸ್ತೀರ್ಣ ಹೇಳಲು ಆಗುವುದಿಲ್ಲ. ಪ್ರತಿವಾದಿಯ ಮನೆ **30** ವರ್ಷಗಳಿಂದ ಇರುತ್ತದೆ ಎಂದರೆಸರಿ. ಸದರಿ ಮನೆಯನ್ನು ರಾಧಾಕೃಷ್ಣ ರೆಡ್ಡಿ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ರಾಧಾಕೃಷ್ಣ ರೆಡ್ಡಿ ತಮ್ಮ ಮನೆಯನ್ನು ಗ್ರಾಮ ಠಾಣಾ ಜಾಗದಲ್ಲಿ ಕಟ್ಟಿದ್ದರು ಎಂದರೆ ಸರಿ. ರಾಧಾಕೃಷ್ಣ ರೆಡ್ಡಿ ಕಟ್ಟಿದ್ದ ಮನೆಯನ್ನು ಪ್ರತಿವಾದಿ ಖರೀದಿ ಮಾಡಿದರು ಎಂದರೆ ಸರಿ. ಪ್ರತಿವಾದಿಯ ಮನೆಯ ನಾಲ್ಕು ಕಡೆ ಜಾಗ ಇರುತ್ತದೆ ಎಂದರೆ ಮುಂದೆ ರಸ್ತೆ ಇರುತ್ತದ, ಹಿಂದೆ ನನ್ನ ಜಾಗ ಇರುತ್ತದೆ. ವಾದಿಯ ಜಮೀನು ಹಾಗೂ ಪ್ರತಿವಾದಿಯ ಮನೆಯ ನಡುವೆ ಖಾಲಿ ಜಾಗ ಇರುವುದಿಲ್ಲ. ಈ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ತೋರಿಸುತ್ತಿರುವ ಪೋಟೋನಲ್ಲಿ ಹೊಸದಾಗಿ ಕಟ್ಟಿದ ಮನೆಯ ಮುಂದೆ ಜಾಗ ಕಾಣುತ್ತಿದೆ ಎಂದರೆ ಸರಿ, ಸದರಿ ಜಾಗ ನನ್ನದಾಗಿರುತ್ತದೆ. ಸದರಿ ಪೋಟೋವನ್ನು ಸಾಕ್ಷಿ ಗುರುತಿಸಿದ ಮೇರೆಗೆ ನಿಡಿ-**3** ಎಂದು ಗುರುತಿಸಲಾಯಿತು. ಸದರಿ ಜಾಗವನ್ನು ನಮ್ಮ ಪೂರ್ವಜರ ಕಾಲದಿಂದಲೂ ನಮ್ಮ ಬಳಿ ಇರುತ್ತದೆ, ಅದು ಗ್ರಾಮ ಠಾಣಾ ಜಾಗ ಆಗಿರುವುದಿಲ್ಲ. ಪ್ರತಿವಾದಿ ರವರ ಮನೆಯ ಪಶ್ಚಿಮಕ್ಕೆ ಮನೆಗಳು ಇವೆ ಎಂದರೆ ಸರಿ. ಪ್ರತಿವಾದಿಯ ಮನೆ ಹಾಗೂ ಪಶ್ಚಿಮದಲ್ಲಿರುವ ಮನೆಗಳು ಗ್ರಾಮ ಠಾಣಾ ಜಾಗದಲ್ಲಿ ಇರುತ್ತವೆ ಎಂದರೆ ಸರಿ. ಪ್ರತಿವಾದಿ ನಿಡಿ-**1** ಮತ್ತು **2** ರಲ್ಲಿ ಕಾಣುವಂತೆ ಸುತ್ತಲೂ ಕಾಂಪೌಂಡ್ ಹಾಕಿಕೊಂಡಿರುತ್ತಾರೆ ಎಂದರೆ ಸರಿ. ನಿಡಿ-**3** ರಲ್ಲಿ ಮನೆಯ ಹಿಂದೆ ಕಾಣುವ ಜಾಗ ನನಗೆ ಸೇರಿಲ್ಲ, ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ನಾನು ವಾದಿಯ ಸಂಬಂಧಿಕನಾದ ಕಾರಣ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

O.S.8/2020
PW-3

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ